# ನವಿಲುಗನ್ನಡಿ

- ಡಿಸೆಂಬರ್ ತಿಂಗಳ ಮಯೂರ ಕಥಾಗುಚ್ಛವನ್ನೇ ಹೊತ್ತು ತಂದಿತ್ತು. ಕೆ. ಕೇಶವ ಶರ್ಮ ಮತ್ತು ಯುವ ಕಥೆಗಾರ ಪ್ರಥಮ್ ಎಸ್. ಅವರ ಕಥೆಗಳು ಮನ ಸೆಳೆದವು. 'ಪುಟ ಬಂಗಾರ' ಬಂಗಾರದ ಪುಟದಂತೆ ಕಂಗೊಳಿಸಿತು. ವರ್ಷಾಂತ್ಯಕ್ಕೆ ಮಯೂರದ ಸಂಚಿಕೆ ಉತ್ತಮವಾಗಿ ಮೂಡಿ ಬಂದಿದ್ದು, ಸಂತೋಷವೆನಿಸಿತು.

**ರೇಶ್ಮಾ ಗುಳೇದಗುಡ್ಡಾಕರ್, ಕೊಟ್ಟೂರು**

- ಡಿಸೆಂಬರ್ ತಿಂಗಳ ಮಯೂರ ಸಂಚಿಕೆಯಲ್ಲಿ ರಹಮತ್ ತರೀಕೆರೆ ಅವರ ಪ್ರಬಂಧ 'ತಗೀ ತಗೀ ಕಸವನ್ನು...' ಓದಿದೆ. ಆರಂಭದಲ್ಲಿ ಚಿಕ್ಕದಾಗಿ ತಮ್ಮ ಏರಿಯಾದಲ್ಲಿ ನಡೆಯುವ ನಿತ್ಯ ಜಗಳದ ಕುರಿತಾಗಿ ವಿವರಿಸುತ್ತಾ ಇಡೀ ರಾಜ್ಯ, ರಾಷ್ಟ್ರೀಯ, ಅಂತರರಾಷ್ಟ್ರೀಯ ಮಟ್ಟದಲ್ಲಿ ಕಸದ ಕುರಿತ ವ್ಯಾಖ್ಯಾನ ನೀಡಿದ್ದಾರೆ. ಈ ಪ್ರಬಂಧವನ್ನು ನಮ್ಮ ಜನಪ್ರತಿನಿಧಿಗಳು ಓದಲೇಬೇಕು.

**ಡಾ. ದೇವೀಂದ್ರಪ್ಪ, ಕನ್ನಡ ವಿಶ್ವವಿದ್ಯಾಲಯ, ಹಂಪಿ**

- 'ಮಯೂರ'ದ ವರ್ಷದ ಕೊನೆಯ ಸಂಚಿಕೆಯ ಮುಖಪುಟ ನೋಡಿ ಪುಲಕಿತಗೊಂಡೆ. ನನ್ನ ಜನ್ಮಸ್ಥಳ ಬನಹಟ್ಟಿಯ ಆರಾಧ್ಯದೈವ ಕಾಡಸಿದ್ಧೇಶ್ವರ ದೇವಸ್ಥಾನದ ಮುಖಪುಟ ಇದಾಗಿತ್ತು. ನನ್ನ ಊರಿನ ಮತ್ತು ನನ್ನ ಜೀವನದ ಅಮೂಲ್ಯ ಕ್ಷಣ ನೆನಪಿಸಿದ ಸಂಪಾದಕೀಯ ಮಂಡಳಿಗೆ ಅನಂತ ವಂದನೆಗಳು.

**ಕೆ.ಪಿ. ರಾಮಗುಂಡಿ, ಬೈಲಹೊಂಗಲ**

- ಡಿಸೆಂಬರ್ ಸಂಚಿಕೆಯ 'ಜಲ್ದಿದೇ ಜರೂರತ್ತು, ನಿಧಾನಕ್ಕಿಲ್ಲ ಕಿಮ್ಮತ್ತು' ಪ್ರಬಂಧ ಬಹಳ ಸೊಗಸಾಗಿ ಮೂಡಿಬಂದಿದೆ. ಹೌದು 'ನಿಧಾನವೇ ಪ್ರಧಾನ' ಎಂಬ ಉಕ್ತಿ ಇದ್ದರೂ, ಹೆಚ್ಚಿನ ಸಮಯ ನಾವು ತೀವ್ರಗತಿ ಪಡೆಯಲೇಬೇಕಾದ ಅನಿವಾರ್ಯತೆ ನಮ್ಮನ್ನು ಚುರುಕಾಗಿಸುತ್ತದೆ. ನಿಧಾನ ಹೆಚ್ಚಿನ ಸಮಯ ಅವಕಾಶದಿಂದಲೇ ವಂಚಿತರಾಗುವ ಸಂದರ್ಭವೂ ಬರುತ್ತದೆ. ಅತಿ ಆತುರ ಮಾಡಿ, ಮಾಡಿದ ಕೆಲಸವೇ ಎಡವಟ್ಟು ಆಗುವುದಕ್ಕಿಂತ, ನಿಧಾನಗತಿಯಲ್ಲಿ ಮಾಡಿ ಆಗಬೇಕಾದ್ದು ಸರಿಯಾಗಿಯೇ ಆಗುವಂತಾದರೆ ಅದೇ ಒಳ್ಳೆಯದು. ಅವಶ್ಯಬಿದ್ದಲ್ಲಿ ಚುರುಕೂ ಆಗು ಎಂಬ ಪಾಠವನ್ನೂ ಈ ಪ್ರಬಂಧ ಹೇಳಿದಂತಿದೆ. ಪ್ರಬಂಧ ಮಂಡನೆ ಚುರುಕಾಗೇ ಇದೆ!




**ಶಂಕರನಾರಾಯಣ ಭಟ್, ಮಾಡಗೇರಿ, ಹೊನ್ನಾವರ**

- ಯುವ ಕಥೆಗಾರ ಪ್ರಥಮ್ ಎಸ್. ಅವರ 'ರೂಬಿಕ್ಸ್ ಕ್ಯೂಬ್' ಕಥೆ ಸೊಗಸಾಗಿದೆ. ರೂಬಿ, ತಾಯಿ ಮತ್ತು ಮಗಳು ಒಂದೇ ದೋಣಿಯಲ್ಲಿ ಪಯಣ! ಮನವು ಹದವಾಯಿತು ಎನ್ನುವ ಹೊತ್ತಿಗೆ ಕಥೆ ಬೇರೆ ತಿರುವು ಪಡೆದುಕೊಂಡಿದೆ. ಒಟ್ಟಾರೆ ಸರಳ ಭಾಷೆ, ಸುಂದರ ಶೈಲಿ, ರಚನೆ ಅಭಿವ್ಯಕ್ತಿ ಚೆನ್ನಾಗಿ ಮನಸ್ಸಿಗೆ ಮುದ ನೀಡಿತು.

**ಎಸ್‌ಆರ್ ನರಸಿಂಹ ಪ್ರಸಾದ್, ಕುಣಿಗಲ್**

- ಪ್ರಭಾಮಣಿ ನಾಗರಾಜ ಅವರ 'ಜಲ್ದೀದೆ ಜರೂರತ್ತು, ನಿಧಾನಕ್ಕಿಲ್ಲ ಕಿಮ್ಮತ್ತು!' ಪ್ರಬಂಧ ವಾಸ್ತವಕ್ಕೆ ಹಿಡಿದ ಕನ್ನಡಿ. ನಿಧಾನಕ್ಕಿಲ್ಲ ಕಿಮ್ಮತ್ತು ಎಂಬುದು ಶೀರ್ಷಿಕೆಯಲ್ಲಿ ಇದ್ದರೂ ನಿಧಾನವೇ ಪ್ರಧಾನ ಎಂಬುದನ್ನು ಸ್ಥಾಪಿಸಿದ್ದಾರೆ.

**ಮಲ್ಲಿಕಾರ್ಜುನ, ಸುರಧೇನುಪುರ**